## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ , ಸಿದ್ಧಾಪುರ

**ಸಿ.ಸಿ. 599/2025**

ಫಿರ್ಯಾದಿಃ ಮ್ಯಾನೇಜರ್, ಜನತಾ ಕೋ–ಆಪೇರೇಟಿವ್ ಕ್ರೇಡಿಟ್ ಸೊಸೈಟಿ ಲಿಮಿಟೆಡ್
ಭಟ್ಕಳ, ಸಿದ್ಧಾಪುರ ಶಾಖೆ, ಸಿದ್ಧಾಪುರ (ಉ.ಕ)

–ವಿರುದ್ಧ–

ಆರೋಪಿಃ ರಿಯಾಜ್ಅಹಮದ್ ತಂದೆ ಮೈದಿನ್ ಸಾಬ್,
ವಯಸ್ಸುಃ ಪ್ರಯಸ್ಥ, ವಾಸಃ 280, ಬೇಡ್ಕಣಿ, ಬೇಡ್ಕಣಿ ಪೋಸ್ಟ,
ಸಿದ್ಧಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

ನಾನು **ಶ್ರೀ. ಹರೀಶಕುಮಾರ್.ಎಮ್. ಬಿ.ಕಾಂ., ಎಲ್.ಎಲ್.ಬಿ.,** ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿದ್ಧಾಪುರ ಆದ ನಾನು, ಆರೋಪಿತನಾದ ನಿನ್ನ ಮೇಲೆ ಈ ಕೆಳಗಿನಂತೆ ಆರೋಪ ಹೊರಿಸುತ್ತಿದ್ದೇನೆ.

**ಆಪಾದನೆ**

ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಜನತಾ ಕೋ–ಆಪೇರೇಟಿವ್ ಕ್ರೇಡಿಟ್ ಸೊಸೈಟಿ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸೌಹಾರ್ದಾ ಕೋ–ಆಪರೇಟಿವ್ ಕಾಯ್ದೆ ರಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿದ್ದು ಹಣಕಾಸು ವ್ಯವಹಾರ, ಅಗತ್ಯವಿರುವವರಿಗೆ ಹಣವನ್ನು ಸಾಲವಾಗಿ ನೀಡುವ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದ್ದು, ಆರೋಪಿತನಾದ ನೀನು ಫಿರ್ಯಾದುದಾರರ ಸಹಕಾರಿ ಸಂಸ್ಥೆಯಲ್ಲಿ ಸಾಲಕ್ಕಾಗಿ ಮನವಿ ಮಾಡಿದ್ದು, ನಂತರ ದಿನಾಂಕ 07.09.2023 ರಂದು ಕನಸ್ಯೂಮರ್ ಡ್ಯೂರಬೇಲ್ ಲೊನ್ ಅಡಿಯಲ್ಲಿ ರೂ.50,000/– ಗಳನ್ನು ಸಾಲ ಪಡೆದಿದ್ದು, ಆರೋಪಿತನಾದ ನೀನು ಸಾಲದ ಕಂತುಗಳನ್ನು ಸರಿಯಾಗಿ ಪಾವತಿ ಮಾಡದೆ ಇದ್ದು, ಸದರಿ ಸಾಲದ ಈಗಿನ ಬಾಕಿ ಮೊತ್ತವು ರೂ.60,500/– ಆಗಿದ್ದು ಹಾಗೂ ಫಿರ್ಯಾದುದಾರರ ಸಂಸ್ಥೆಯು ಹಲವು ಬಾರಿ ಸಾಲದ ಮರುಪಾವತಿಗಾಗಿ ಬೇಡಿಕೆ ಇಟ್ಟಿದ್ದು, ಸದರಿ ಸಾಲದ ಬಾಬ್ತಿಗಾಗಿ ದಿನಾಂಕ 11.09.2025 ರಂದು ಎಚ್ ಡಿ ಎಫ್ ಸಿ ಬ್ಯಾಂಕ್, ಶಿವಮೊಗ್ಗ ಶಾಖೆಯ ಚೆಕ್ಕಿನ ಸಂಖ್ಯೆ: 000006 ನ ರೂ.60,500/– ನ ಚೆಕನ್ನು ನೀಡಿದ್ದು, ತದನಂತರ ಸಹಕಾರಿ ಸಂಸ್ಥೆಯು ಸದರಿ ಚೆಕನ್ನು ನಗದು ಗೊಳಿಸಲು ಕೆನರಾ ಬ್ಯಾಂಕ್, ಸಿದ್ಧಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 12.09.2025 ರಂದು "Account Blocked" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ

ವಿಷಯವನ್ನು ದಿಃ 08.10.2025 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸು ದಿನಾಂಕ: 14.10.2025 ರಂದು ಷರಾ Addressee absent and unclaimed return to sender" ಎಂದು ವಾಪಸ್ಸು ಬಂದಿದ್ದು ಹಾಗೂ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಫರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸ್ಧ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ.

ಈ ಮೇಲ್ಕಂಡ ಆರೋಪಣೆಗೆ ನೀನು ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸಿರುತ್ತೇನೆ .

ಪ್ರಶ್ನೆಃ 1. ಈಗ ನಿನಗೆ ಮೇಲೆ ಓದಿ ಹೇಳಿ ವಿವರಿಸಿದ ಆರೋಪಣೆ ತಿಳಿಯಿತೆ ?

**ಉತ್ತರಃ**

ಪ್ರಶ್ನೆಃ 2. ನೀನು ಈ ಮೇಲಿನ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ನಿನ್ನ ವಿರುದ್ಧ ವಿಚಾರಣೆ ನಡೆಯಬೇಕೆ?

**ಉತ್ತರಃ**

**ಪ್ರಶ್ನೆಃ 3** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 000006 ನಿಮ್ಮ ಎಚ್ ಡಿ ಎಫ್ ಸಿ ಬ್ಯಾಂಕ್ ಖಾತಾ ನಂ. 50100087013933 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳವಿರಾ?

**ಉತ್ತರಃ**

**ಪ್ರಶ್ನೆಃ 4** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 000006 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 5** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 000006 ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆ: 6** ಪಿರ್ಯಾದಿ ಸೊಸೈಟಿಯಿಂದ ದಿನಾಂಕ 07.09.2023 ರಂದು ರೂ.50,000/- ಸಾಲವನ್ನು ಪಡೆದಿರುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 000006 ದಿನಾಂಕ 11.09.2025 ರಲ್ಲಿ ನಮೂದಿಸಿದ ರೂ.60,500/-ನ್ನು (ಅರವತ್ತು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಪಿರ್ಯಾದಿ ಸೊಸೈಟಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಛಿಸುವಿರಾ?

**ಉತ್ತರಃ**

ಸದ್ರಿ ಮೇಲಿನ ಆರೋಪಣೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಿಃ **04.04.2026** ರಂದು ಆರೋಪಿತನಿಗೆ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**